APRIL 18,2025

ALL INDIA RADIO- DHARWAD

PRADESH SAMACHARA (KANNADA) 12PM

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

'ಗಿಡ–ಗಿಡಕ ಕೂತು, ಕೈ ಮಾಡಿ ಕರೀತಾವ.. ಹಾಡುವ ಹಕ್ಕಿ ಬಳಗ' ಎಂಬ ವಿನೂತನ, ಜಾನಪದ ಅರಿವು ಕಾರ್ಯಕ್ರಮಕ್ಕೆ, ಜಾನಪದ ಅಕಾದೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ, ಕೊಪ್ಪಳದ ಶ್ರೀ ಗವಿಸಿದ್ಧೇಶ್ವರ ಸ್ನಾತಕ ಶಿಕ್ಷಣ ಮಹಾವಿದ್ಯಾಲಯದಲ್ಲಿ, ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಚಾಮರಾಜ ನಗರದಲ್ಲಿ 'ಮತೀಗಲ ಧರಣಿಸೋ ಮಹಾದೇವ', ಕೋಲಾರದಲ್ಲಿ 'ನಾದವಾದಿಸೇ ಮನಸೇ ನಾದವಾದಿಸೆ', ಚಿತ್ರದುರ್ಗದಲ್ಲಿ 'ಕಿಲಾರಿ ಕಲರವ', ತುಮಕೂರು ವಿಶ್ವವಿದ್ಯಾಲಯದಲ್ಲಿ 'ವಿದ್ಯಾರ್ಥಿಗಳ ಕಡೆ, ನಮ್ಮ ನಡೆ' ಎಂಬ, ವಿಶೇಷ ಕಾರ್ಯಕ್ರಮಗಳ ಮೂಲಕ, ಜನಪದ ಸಂಸ್ಕೃತಿ ಬಗ್ಗೆ ತಿಳಿವಳಿಕೆ ಮೂಡಿಸಲಾಗುತ್ತಿದೆ ಎಂದರು.

<><><>

ಧ್ವನಿ: ಗೊಲ್ಲಹಳ್ಳಿ ಶಿವಪ್ರಸಾದ್ 35 ಸೆಕೆಂದುಗಳು

<><><>

ಎಂ.ಗೋವಿಂದರಾವ್ ಅಧ್ಯಕ್ಷತೆಯ, ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿ, ಬೆಂಗಳೂರು ವಿಭಾಗ ಮಟ್ಟದ, ಸಂವಾದ ಸಭೆಯನ್ನು, ಈ ತಿಂಗಳ 28 ರಂದು ಬೆಳಗ್ಗೆ 11 ಗಂಟೆಗೆ, ಚಿತ್ರದುರ್ಗ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಏರ್ಪಡಿಸಿದೆ. ತುಮಕೂರು, ದಾವಣಗೆರೆ, ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳ ಜನಪ್ರತಿನಿಧಿಗಳು, ಅಧಿಕಾರಿಗಳು, ಸಂಘ ಸಂಸ್ಥೆಗಳ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು, ಜಿಲ್ಲಾಧಿಕಾರಿ ಟಿ. ವೆಂಕಟೇಶ ತಿಳಿಸಿದ್ದಾರೆ.

<><><>

ಮಹಾತ್ಮ ಗಾಂಧಿ ನರೇಗಾ ಯೋಜನೆ ಅಡಿ, ಕಾರ್ಮಿಕರಿಗೆ ಇದ್ದೂರಲ್ಲೇ ಕೆಲಸ ನೀಡಿ, ದಿನವೊಂದಕ್ಕೆ 370 ರೂಪಾಯಿ ಕೂಲಿ ನೀಡಲಾಗುವುದು ಎಂದು, ಗದಗ ಜಿಲ್ಲೆ, ಗಜೇಂದ್ರಗಡ ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ, ಮಂಜುಳಾ ಹಕಾರಿ ತಿಳಿಸಿದ್ದಾರೆ. ಚಿಕ್ಕ ಅಳಗುಂಡಿ ಗ್ರಾಮದಲ್ಲಿ, ಸಮುದಾಯ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ, ಬೇಸಿಗೆ ಅವಧಿಯಲ್ಲಿಯೂ ಕಾರ್ಮಿಕರಿಗೆ, ಕೆಲಸ ನೀಡಲಾಗುವುದು ಎಂದರು. ಜಿಲ್ಲೆಯ ಚಿಕ್ಕಮಣ್ಣೂರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 2025–26 ನೇ ಸಾಲಿನ, ನರೇಗಾ ಸಮುದಾಯ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿದ ರೋಣ ತಾಲೂಕು ಪಂಚಾಯತ ಕಾರ್ಯ ನಿರ್ವಾಹಕ ಅಧಿಕಾರಿ ಚಂದ್ರಶೇಖರ ಕಂದಕೂರ ಯೋಜನೆ ಕಾಮಗಾರಿಯನ್ನು ಪರಿಶೀಲಿಸಿದರು.

<><><>

ರಾಷ್ಟ್ರೀಯ, ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿ, 7ನೇ ಸುತ್ತಿನ ಲಸಿಕಾ ಅಭಿಯಾನ, 21 ರಿಂದ ಜೂನ್ 4ರ ವರೆಗೆ ನಡೆಯಲಿದೆ. ಕಾಲು, ಬಾಯಿ ರೋಗ ಮತ್ತು ಚರ್ಮಗಂಟು ರೋಗದ ವಿರುದ್ಧ, ಲಸಿಕೆಯನ್ನು ಏಕಕಾಲಕ್ಕೆ ರಾಜ್ಯಾದ್ಯಂತ ಹಾಕಲಾಗುತ್ತಿದೆ.

<><><>

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ, 8 ಸಂಚಾರಿ ಪಶು ಚಿಕಿತ್ಸಾ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಜನೆವರಿ ಯಿಂದ ಮಾರ್ಚ್ ಅಂತ್ಯದ ವರೆಗೆ, 3 ಸಾವಿರದ 243 ದನ, ಕರುಗಳಿಗೆ ಚಿಕಿತ್ಸೆ ನೀಡಲಾಗಿದೆ ಎಂದು, ಪಶು ಪಾಲನಾ ಇಲಾಖೆ ಉಪ ನಿರ್ದೇಶಕ ಡಾಕ್ಟರ್ ರಂಗಪ್ಪ ತಿಳಿಸಿದ್ದಾರೆ.

<><><>

ಪ್ರಧಾನಮಂತ್ರಿ ಜಲ ಜೀವನ್ ಮಿ ’ನ್ ಯೋಜನೆ ಅಡಿ, ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲೂಕಿನ, ಹೊಸೂರು ಗ್ರಾಮದ 90 ಮನೆಗಳಿಗೆ, ಶುದ್ಧ ಕುಡಿಯುವ ನೀರು ಪೂರೈಕೆಯಾಗುತ್ತಿದೆ ಎಂದು, ಕಾರ್ಯಪಾಲಕ ಅಭಿಯಂತರೆ ಭವ್ಯಶ್ರೀ ತಿಳಿಸಿದ್ದಾರೆ. ಸೌರ ಶಕ್ತಿಯನ್ನು ಸಹ ಬಳಸಿಕೊಂಡು, ನೀರಿನ ಸಮರ್ಪಕ ಪೂರೈಕೆ ಮಾಡುತ್ತಿರುವುದು, ವಿಶೇ ’. ಎಲ್ಲ ಸಮಯದಲ್ಲೂ ನೀರು ಪೂರೈಕೆಯಾಗುವಂತೆ ನೋಡಿಕೊಳ್ಳಲಾಗಿದೆ, ಎಂದು ಮಾಹಿತಿ ನೀಡಿದರು.

<><><>

ಗುಡ್ ಫ್ರೈಡೆ ಹಿನ್ನೆಲೆ ಇಂದು ನಾಡಿನಾದ್ಯಂತ ಚರ್ಚ್‌ಗಳಲ್ಲಿ ವಿಶೇಷ ಪ್ರಾರ್ಥನೆ ಆಯೋಜಿಸಲಾಗಿದೆ. ಚಿತ್ರದುರ್ಗ ನಗರದಲ್ಲಿ ಕ್ರೈಸ್ತ ಅನುಯಾಯಿಗಳು ಚರ್ಚ್ ಗಳಿಗೆ ತೆರಳಿ ವಿಶೇಷ ಪ್ರಾರ್ಥನೆಯಲ್ಲಿ ಪಾಲ್ಗೊಂಡರು.

<><><>

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಚಿಕ್ಕಬಳ್ಳಾಪುರದಲ್ಲಿ, ಕೇಂದ್ರದ ಜಲ ಜೀವನ್ ಮಿ ’ನ್ ಹಾಗೂ ಅಮೃತ ಯೋಜನೆ ಅಡಿ, 2026ರ ವೇಳೆಗೆ, ಎಲ್ಲ ಮನೆಗಳಿಗೂ ಶುದ್ಧ ಕುಡಿಯುವ ನೀರು ಪೂರೈಸಲಾಗುವುದು ಎಂದು, ಸಂಸದ ಕೆ.ಸುಧಾಕರ ತಿಳಿಸಿದ್ದಾರೆ.

<><><>

ಭಾರತದ ಸಾರ್ವಜನಿಕ ಪ್ರಸಾರ ಸೇವೆ, ಪ್ರಸಾರ ಭಾರತಿ, ಓ.ಟಿ.ಟಿ.ಯಲ್ಲಿ ವೇವ್ಸ್ ವೇದಿಕೆ ಮೂಲಕ, ತನ್ನ ಕಾರ್ಯಕ್ರಮಗಳನ್ನು ಆನ್ಲೈನ್‌ನಲ್ಲಿ ಒದಗಿಸುತ್ತಿದೆ. ಕನ್ನಡ ಸೇರಿದಂತೆ, 12 ವಿವಿಧ ಭಾಷೆಗಳಲ್ಲಿ, ವೇವ್ಸ್ ವೇದಿಕೆ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸುತ್ತಿದೆ. ಆಕಾಶವಾಣಿಯ ಎಲ್ಲ ಕಾರ್ಯಕ್ರಮಗಳ, 'ಲೈವ್ ಸ್ಟ್ರೀಮಿಂಗ್'ಗೆ ಅವಕಾಶ ಕಲ್ಪಿಸಲಾಗಿದೆ. ಉಚಿತವಾಗಿ ಹಾಗೂ ಚಂದಾದಾರರಾಗಿ ಈ ಕಾರ್ಯಕ್ರಮಗಳನ್ನು, ಆಲಿಸಬಹುದಾಗಿದೆ. ಜೊತೆಗೆ, 65 ಲೈವ್ ಚಾನೆಲ್‌ಗಳಿದ್ದು, ಟಿ.ವಿ. ಶೋ, ಆಟಗಳು ಮತ್ತು ಲೈವ್ ಕಾರ್ಯಕ್ರಮಗಳನ್ನು ವೀಕ್ಷಿಸಬಹುದಾಗಿದೆ. ಇ–ಕಾಮರ್ಸ್ ವೇದಿಕೆ ಮೂಲಕ, ಓಪನ್ ನೆಟ್‌ವರ್ಕ್ ಹಾಗೂ ಡಿಜಿಟಲ್ ಕಾಮರ್ಸ್ – ಓ.ಎನ್.ಡಿ.ಸಿ., ಆನ್ಲೈನ್ ಖರೀದಿಗೂ ಸಹ ವೇವ್ಸ್ ಓ.ಟಿ.ಟಿ. ಅನೇಕ ಅವಕಾಶಗಳನ್ನು ಒದಗಿಸಿದೆ.

<><><>

ಸುಪ್ರೀಂ ಕೋರ್ಟ್ ಹಿರಿಯ ವಕೀಲ ಹಾಗೂ ರಾಜ್ಯದ ಪರವಾಗಿ ವಾದ ಮಂಡಿಸಿದ್ದ, ಧಾರವಾಡ ಮೂಲದ, ಶರತ್ ಜವಳಿ ಅವರ ನಿಧನಕ್ಕೆ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸಂತಾಪ ವ್ಯಕ್ತಪಡಿಸಿದ್ದಾರೆ.

<><><>

ಗದಗ ಜಿಲ್ಲೆ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಅವರ ಅಧ್ಯಕ್ಷತೆಯಲ್ಲಿ, ಮುಳಗುಂದದ ಎಸ್.ಜೆ., ಜೆ.ಎಂ. ಪ್ರೌಢ ಶಾಲೆ ಆವರಣದಲ್ಲಿ, ನಾಳೆ ಬೆಳಗ್ಗೆ 10.30ಕ್ಕೆ, ಜನತಾ ದರ್ಶನ ಜರುಗಲಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.

<><><>